**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## O.S. No. 169/2023

ಸಾಕ್ಷಿಯನ್ನು ದಿನಾಂಕಃ 19.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ಶ್ರೀಮತಿ. ಹೆಚ್.ವಿ.ಎಸ್. ವಕೀಲರಿಂದಃ**

ಈ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣಿಕರಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ಪ್ರತಿವಾದ ಪತ್ರ ಹಾಗು ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

01 ಕೈ-ಬರಹದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಡಿ.-1** ಎಂದು, Record of Right ನ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-2** ಎಂದು, ಪಟ್ಟಾ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-3** ಎಂದು, ನಮೂನೆ-5 ಮತ್ತು ನಮಾನೆ-6ರ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-4** ಎಂದು, Yield Report ಅನ್ನು ಹಾಜರುಪಡಿಸಿದ್ದು, ಅದನ್ನು **ನಿ.ಡಿ.-5** ಎಂದು, ಮ್ಯುಟೇಷನ್ ರಿಜಿಸ್ಟರ್ ಆದೇಶ ಪ್ರತಿಯ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-6** ಎಂದು, ತಹಶೀಲ್ದಾರ್ ರವರಿಗೆ ನೀಡಿದ ಅರ್ಜಿಯ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಡಿ.-7** ಎಂದು, 11 ಫೋಟೋಗಳು ಮತ್ತು ಅದಕ್ಕೆ ಸಂಬಂಧಿಸಿದ 01 ಸಿ.ಡಿ. ಯನ್ನು ಹಾಜರುಪಡಿಸಿದ್ದು 11 ಫೋಟೋಗಳನ್ನು ಕ್ರಮವಾಗಿ **ನಿ.ಡಿ.-8 ರಿಂದ ನಿ.ಡಿ.-18** ಎಂದು ಮತ್ತು 01 ಸಿ.ಡಿ. ಯನ್ನು **ನಿ.ಡಿ.-19** ಎಂದು ಗುರುತಿಸಲಾಯಿತು.

**ಪಾಟಿ ಸವಾಲು: ವಾದಿಗಳ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**